ಸಹಾಯಕ ಕಾರ್ಯಪಾಲಕ ಅಭಿಯಂತರರ ಕಚೇರಿ
ಕೋರಮಂಗಲ ಉಪ-ವಿಭಾಗ
17ನೇ ಎ ಮುಖ್ಯರಸ್ತೆ, 2ನೇ ಅಡ್ಡರಸ್ತೆ,
5ನೇ ಬ್ಲಾಕ್, ಕೋರಮಂಗಲ
ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ ವಾರ್ಡ್ ಸಮಿತಿ/ ಸಹಾಯಕ ಅಭಿಯಂತರರು ರವರ ಕಛೇರಿ, ಕೋರಮಂಗಲ ವಾರ್ಡ್ 151, ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ, 5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು

ದಿನಾಂಕ:02.09.2022

## -: ಸಭೆ ತಿಳುವಳಿಕೆ ಪತ್ರ :-

**ವಿಷಯ :-** ದಿನಾಂಕ:06.09.2022 ರಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿರುವ ಬಗ್ಗೆ.

**ಉಲ್ಲೇಖ:-** ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಚೇರಿ ಆದೇಶದ ಪತ್ರ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ:21-09-2020.

* * * * *

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್-151 ರ ನೋಡಲ್ ಅಧಿಕಾರಿಯವರಾದ ಶ್ರೀ ವನರಾಜ .ಪಿ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:06.09.2022 ರಂದು ಬೆಳಗ್ಗೆ 11.00 ಕ್ಕೆ ಸ್ಥಳ: ಕೋರಮಂಗಲ ವಾರ್ಡ್ 151ರ ಕಛೇರಿ, ಕಾಮಗಾರಿ ಇಲಾಖೆ, 2ನೇ ಅಡ್ಡರಸ್ತೆ, 5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು ರಲ್ಲಿ ವಾರ್ಡಿಗೆ ಸಂಬಂಧಪಟ್ಟ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ವಾರ್ಡ್ ಕಮಿಟಿ ಸಭೆಯನ್ನು ನಡೆಸಲು ನಿರ್ಧರಿಸಲಾಗಿದ್ದು, ಸದರಿ ದಿನಾಂಕದಂದು ತಾವುಗಳು ತಪ್ಪದೇ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

**ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು:** 1) ವಾರ್ಡಿನ ಘನತ್ಯಾಜ್ಯದ ಬಗ್ಗೆ 2) ವಾರ್ಡಿನಲ್ಲಿ ಕೋವಿಡ್-19ರ ಬಗ್ಗೆ 3) ಸಾರ್ವಜನಿಕರ ಮೂಲಭೂತ ಸೌಕರ್ಯಗಳ ಬಗ್ಗೆ 4) BWSSB, BESCOM & POLICE ಇಲಾಖೆಗಳ ಹಾಗೂ ತೆರಿಗೆ ವಸೂಲಾತಿಗಳ ಬಗ್ಗೆ ಈ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳೊಂದಿಗೆ ತಪ್ಪದೇ ಈ ಸಮಿತಿ ಸಭೆಗೆ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ 151, ಕೋರಮಂಗಲ

ಪ್ರತಿಯನ್ನು:-

1. ಶ್ರೀ ವನರಾಜ .ಪಿ, ನೋಡಲ್ ಅಧಿಕಾರಿಗಳು ಹಾಗೂ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಅಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ. ಲೇಔಟ್ ವಿಭಾಗ) ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪವಿಭಾಗ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಬಿ.ಟಿ.ಎಂ.ಲೇಔಟ್ ವಿಭಾಗ, ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
6. ಆರೋಗ್ಯ ವೈದ್ಯಾಧಿಕಾರಿಗಳು, ಬಿ.ಟಿ.ಎಂ. ಲೇಔಟ್ ವಿಭಾಗ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ನಿರ್ದೇಶಕರು, ತೋಟಗಾರಿಕೆ, ಬಿ.ಬಿ.ಎಂ.ಪಿ. (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.

Office of the Inspector of Police
Bangalore
Date 03/09/22
Koramangala Police Station

Scanned by CamScanner

8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನೆ (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
11. ಸಹಾಯಕ ಕಂದಾಯ ಅಧಿಕಾರಿಗಳು, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
12. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್), ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
13. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್), ಮಡಿವಾಳ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
14. ಪೊಲೀಸ್ ಇನ್ಸ್‌ಪೆಕ್ಟರ್ (ಟ್ರಾಫಿಕ್), ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
15. ಸಹಾಯಕ ನಿರ್ದೇಶಕರು, ಪಶುಪಾಲನೆ ಇಲಾಖೆ, ಬಿ.ಬಿ.ಎಂ.ಪಿ.(ದ), ಸಜ್ಜನ್‌ರಾವ್ ವೃತ್ತ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
16. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ.(ವಿದ್ಯುತ್) ದಕ್ಷಿಣ ವಲಯ, ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
17. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ (WWM), ಯೋಜನೆ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
18. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿ.ಬಿ.ಎಂ.ಪಿ (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
19. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಳೆನೀರುಗಾಲುವೆ ವಿಭಾಗ (SWD), ಬಿಟಿಎಂ ಲೇಔಟ್ ವಿಭಾಗ ಮಾಹಿತಿಗಾಗಿ ಸಲ್ಲಿಸಿದೆ.
20. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ(RI)/ಮೇಜರ್ ರೋಡ್ಸ್ (ದಕ್ಷಿಣ) ಮಾಹಿತಿಗಾಗಿ ಸಲ್ಲಿಸಿದೆ.
21. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನೆ (ಕೇಂದ್ರ), ಎನ್.ಆರ್.ವೃತ್ತ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
22. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೆರೆಗಳು ಯೋಜನೆ ಉಪವಿಭಾಗ, ಎನ್.ಆರ್. ವೃತ್ತ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
23. ಕಛೇರಿ ಕಡತಕ್ಕೆ.

Scanned by CamScanner

Ward Committee Meeting Ward 151 Kormangala

Date :- 06-09-2022
Day :- Tuesday



| SL. NO | Name | Signature |
|---|---|---|
| 1 | Sri P. Vanaraj [Nodal officer] | P. [signature] |
| 2 | Sri M. Chandrappa [Ex corp] | [signature] |
| 3 | Smt Padmashree Balaram | [signature] |
| 4 | Sri M.A. Abbas | [signature] |
| 5 | Sri K.N. Chandrashekar | |
| 6 | Sri Vishwanath Kashyap | Vishwanath Kashyap |
| 7 | Sri G.M. Shetty | |
| 8 | Dr. K. Umeshwara | [signature] |
| 9 | Sri Jayaramu | |
| 10 | Smt Neerajashetty | [signature] |
| 11 | Sri M. Srinivas | |
| 12 | Sri M. Sampangi Raju | M. Sampangi Raju |
| 13 | Sri P. Chandrashekar | [signature] |
| 12 | Parvathi Sriramu | [signature] |
| 13 | Jaya Chandrashekar | [signature] |
| 14. | Anil Kumar M RI W151 | [signature] |
| 15. | K. Siddagangaiah RO W147 | [signature] |



| SL. NO | Name | Department | Signature |
|---|---|---|---|
| 1) | Sachin | Health | [signature] |
| 2) | Santhosh | POLICE | [signature] |
| 3) | Yunakishore K | Health | [signature] |
| 4) | Sadathulla khan. | POLICE Assistant | [signature] |
| 5) | Y. Babu | W-151 T.I | [signature] |
| 6) | Padmashree Balaram | W-151, IBK RWA | [signature] |
| 7) | Parvathi Sriramu | RWA President. 4th Block | [signature] |
| 8) | B.R. Siva W.I (BWSSB) | 9845375133 | [signature] |
| 9) | Prasad S.N. | 8884641001 | [signature] |
| 10) | Narasimhamurthy | 9901956514 | [signature] |

Scanned by CamScanner



Scanned by CamScanner

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ಕೋರಮಂಗಲ ಉಪ-ವಿಭಾಗದ ವಾರ್ಡ್ ಸಂಖ್ಯೆ-151 (ಕೋರಮಂಗಲ)

### ವಾರ್ಡ್ 151ರ ಕಛೇರಿ, ಕಾಮಗಾರಿ ಇಲಾಖೆ, 2ನೇ ಅಡ್ಡರಸ್ತೆ, 5ನೇ ಬ್ಲಾಕ್, ಕೋರಮಂಗಲದಲ್ಲಿ ದಿನಾಂಕ:06.09.2022 ರಂದು ಸೆಪ್ಟೆಂಬರ್-2022 ರ ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಪಿ. ವನರಾಜ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 151ರ ರವರ ಅಧ್ಯಕ್ಷತೆಯಲ್ಲಿ ಕೋರಮಂಗಲ ವಾರ್ಡ್ 151ರ ಕಛೇರಿ, ಕಾಮಗಾರಿ ಇಲಾಖೆ, 2ನೇ ಅಡ್ಡರಸ್ತೆ, 5ನೇ ಬ್ಲಾಕ್ ಕೋರಮಂಗಲ, ಬೆಂಗಳೂರು ಇಲ್ಲಿ ದಿನಾಂಕ:06.09.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರೊಂದಿಗೆ ನಡೆದ ಸಭೆಯ ನಡವಳಿಗಳು:-

**ಹಾಜರಿದ್ದ ಸದಸ್ಯರುಗಳು:**

1. ಶ್ರೀ ಎಂ. ಚಂದ್ರಪ್ಪ
2. ಶ್ರೀಮತಿ ಪದ್ಮಶ್ರೀ ಬಲರಾಮ್
3. ಶ್ರೀ ಎಂ.ಎ. ಅಬ್ಬಾಸ್
4. ಶ್ರೀ ವಿಶ್ವನಾಥ್ ಕಶ್ಯಪ್
5. ಡಾ|| ಕೆ. ಉಮೇಶ್ವರ
6. ಶ್ರೀಮತಿ ನೀರಜಾ ಶೆಟ್ಟಿ
7. ಶ್ರೀ ಎಂ. ಸಂಪಂಗಿರಾಜು
8. ಶ್ರೀಮತಿ ಪಾರ್ವತಿ ಶ್ರೀರಾಮ
9. ಶ್ರೀಮತಿ ಜಯ ಚಂದ್ರಶೇಖರ್

**ಹಾಜರಿದ್ದ ಅಧಿಕಾರಿಗಳ ವಿವರಗಳು**

1. ಶ್ರೀ ಪಿ. ವನರಾಜ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
2. ಶ್ರೀ ಚಂದ್ರಶೇಖರ್ .ಪಿ., ಕಾರ್ಯದರ್ಶಿ, ವಾರ್ಡ್ ಸಮಿತಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್-151 ಕೋರಮಂಗಲ
3. ಶ್ರೀ ಅನಿಲ್ ಕುಮಾರ್ .ಎಂ, ಕಂದಾಯ ನಿರೀಕ್ಷಕರು
4. ಶ್ರೀ ಸಿದ್ದಗಂಗಯ್ಯ, ಆರ್.ಓ. ವಾರ್ಡ್ 151
5. ಶ್ರೀ ಸಚಿನ್, ಆರೋಗ್ಯ ಇಲಾಖೆ, ಬಿ.ಬಿ.ಎಂ.ಪಿ
6. ಶ್ರೀ ಸಂತೋಷ್, ಪಿ.ಎಸ್.ಐ., ಕೋರಮಂಗಲ ಪೊಲೀಸ್ ಠಾಣೆ
7. ಶ್ರೀ ಯುವ ಕಿಶೋರ್, ಆರೋಗ್ಯ ಇಲಾಖೆ, ಬಿ.ಬಿ.ಎಂ.ಪಿ
8. ಶ್ರೀ ಸಾದತ್ ಉಲ್ಲಾ ಖಾನ್, ಎ.ಎಸ್.ಐ., ಪೊಲೀಸ್ ಇಲಾಖೆ
9. ಶ್ರೀ ವಿ. ಬಾಬು, ತೆರಿಗೆ ನಿರೀಕ್ಷಕರು, ವಾರ್ಡ್-151
10. ಶ್ರೀ ಕೃಷ್ಣ, ಕೆಲಸ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
11. ಶ್ರೀ ಪ್ರಸಾದ್ .ಎನ್, ಕಿರಿಯ ಆರೋಗ್ಯ ನಿರೀಕ್ಷಕರು, ಎಸ್.ಡಬ್ಲ್ಯೂ.ಎಂ

* * * * * *

ಶ್ರೀ ಪಿ. ವನರಾಜ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 151 ರವರು ಮೊದಲಿಗೆ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿಯ ಎಲ್ಲಾ ಸದಸ್ಯರುಗಳನ್ನು ಮತ್ತು ಇಲಾಖಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು ಹಾಗೂ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.



Scanned by CamScanner

ಶ್ರೀಮತಿ ಪದ್ಮಶ್ರೀ ಬಲರಾಮ್ ರವರು ಮಾತನಾಡಿ, ಕೋರಮಂಗಲ 1ನೇ ಬ್ಲಾಕ್‌ನಲ್ಲಿ ವಿದ್ಯುತ್ ಏರಿಳಿತ (Fluctuation) ಉಂಟಾಗುತ್ತಿರುತ್ತದೆ. ಆದುದರಿಂದ ಸಂಬಂಧಪಟ್ಟ ಇಲಾಖೆಯವರು ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀಮತಿ ಪದ್ಮಶ್ರೀ ಬಲರಾಮ್ ರವರು ಮಾತನಾಡಿ, 6ನೇ ಮುಖ್ಯರಸ್ತೆ, ಕೋರಮಂಗಲ 1ನೇ ಬ್ಲಾಕ್‌ನಲ್ಲಿ ರಸ್ತೆ ಚರಂಡಿಯನ್ನು ನಿರ್ಮಿಸಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ, ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಕೆಲವು ತಗ್ಗುಪ್ರದೇಶಗಳಲ್ಲಿ ಪ್ರವಾಹ ಉಂಟಾಗಿ ಮನೆಗಳಿಗೆ ನೀರು ನುಗ್ಗಿ ಹಾಗು ನೀರಿನ ಸಂಪುಗಳಿಗೆ ರಸ್ತೆಯ ಮೇಲಿನ ಮಳೆ ನೀರು ಸೇರಿದ್ದು, ಬಳಕೆಗೆ ಯೋಗ್ಯವಾಗಿರುವುದಿಲ್ಲ. ಆದುದರಿಂದ ಇನ್ನು ಮುಂದೆ ಮಳೆಯಿಂದ ಪ್ರವಾಹ ಉಂಟಾದ ಸಂದರ್ಭದಲ್ಲಿ ಬಳಸಲು ನೀರಿನ ಪೂರೈಕೆ ಮಾಡಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ, ರಸ್ತೆ ಚರಂಡಿಯಲ್ಲಿ ಇರುವ ಹೂಳುಗಳನ್ನು ತೆರವುಗೊಳಿಸಿದ ನಂತರ ಹೂಳುಗಳನ್ನು ರಸ್ತೆಯ ಬದಿಯಲ್ಲಿ ಬಿಟ್ಟಿರುವಾಗ ಆ ಸ್ಥಳದಲ್ಲಿ ಬ್ಯಾರಿಕೇಡಿಂಗ್ ಅನ್ನು ಹಾಕುವಂತೆ ಸಭೆಯಲ್ಲಿ ತಿಳಿಸಿದರು.

ಶ್ರೀಮತಿ ಪದ್ಮಶ್ರೀ ಬಲರಾಮ್, ಶ್ರೀ ವಿಶ್ವನಾಥ್ ಕಶ್ಯಪ್, ಡಾ॥ ಕೆ. ಉಮೇಶ್ವರ ಮತ್ತು ಶ್ರೀಮತಿ ನೀರಜಾ ಶೆಟ್ಟಿ ರವರು ಮಾತನಾಡಿ, ಬೆಥನಿ ಶಾಲೆ, ಬಿ.ಮೋನಾ ಶಾಲೆ ಮತ್ತು ರೆಡ್ಡಿ ಶಾಲೆಯ ಶಾಲಾ ವಾಹನಗಳು ಹಾಗೂ ದ್ವಿಚಕ್ರ ವಾಹನಗಳನ್ನು ರಸ್ತೆ ಬದಿಯಲ್ಲಿ ನಿಲ್ಲಿಸುತ್ತಿರುವುದು ಕಂಡು ಬಂದಿರುತ್ತದೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ರಸ್ತೆ ಬದಿಯಲ್ಲಿ ಶಾಲಾ ವಾಹನಗಳನ್ನು ನಿಲ್ಲಿಸದಂತೆ ಕ್ರಮವಹಿಸಬೇಕೆಂದು ಸಭೆಯಲ್ಲಿ ಕೋರಿದರು.

ಡಾ॥ ಕೆ. ಉಮೇಶ್ವರ ಮತ್ತು ಶ್ರೀಮತಿ ನೀರಜಾ ಶೆಟ್ಟಿ ರವರು ಮಾತನಾಡಿ, ಕೆನರಾ ಬ್ಯಾಂಕ್ ರಸ್ತೆ ಮತ್ತು ಕ್ಲಬ್ ರಸ್ತೆಗಳು ಏಕಮುಖ (One Way) ಸಂಚಾರವಾಗಿರುತ್ತದೆ. ಆದುದರಿಂದ ಈ ರಸ್ತೆಗಳನ್ನು ಸಾರ್ವಜನಿಕರ ಅನುಕೂಲಕ್ಕಾಗಿ ದ್ವಿಮುಖ (Two Way) ಸಂಚಾರವನ್ನಾಗಿ ಮಾರ್ಪಾಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ, ಕೃಪಾನಿಧಿ ಕಾಲೇಜ್ ಹಾಗೂ ರೆಡ್ಡಿ ಕಾಲೇಜ್ ವಿದ್ಯಾರ್ಥಿಗಳು 16ನೇ 'ಎ' ಮುಖ್ಯರಸ್ತೆ, 16ನೇ 'ಬಿ' ಮುಖ್ಯರಸ್ತೆ, 3ನೇ ಬ್ಲಾಕ್ ಕೋರಮಂಗಲದಲ್ಲಿರುವ ಪಾರ್ಕ್ ಮತ್ತು ಸುತ್ತಮುತ್ತಲಿನ ರಸ್ತೆಗಳಲ್ಲಿ ವಿದ್ಯಾರ್ಥಿಗಳು ಕೇಕ್ ಕತ್ತರಿಸಿ, ರಸ್ತೆಗಳನ್ನು ಹಾಳು ಮಾಡುತ್ತಿರುವುದು ಕಂಡು ಬಂದಿರುತ್ತದೆ.

ಶ್ರೀಮತಿ ಪದ್ಮಶ್ರೀ ಬಲರಾಮ್ ರವರು ಮಾತನಾಡಿ, ಕೋರಮಂಗಲ 1ನೇ ಬ್ಲಾಕ್ ನಲ್ಲಿ ಡಾಂಬರು ಮಾಡಿರುವ ಕೆಲವು ರಸ್ತೆಗಳಿಗೆ Road Marking ಮಾಡಿರುವುದಿಲ್ಲ. ಆದುದರಿಂದ ಸದರಿ ರಸ್ತೆಗಳಿಗೆ Road Marking ಮಾಡುವಂತೆ ಸಭೆಗೆ ತಿಳಿಸಿದರು.

ಶ್ರೀಮತಿ ಪದ್ಮಶ್ರೀ ಬಲರಾಮ್ ರವರು ಮಾತನಾಡಿ, ಕೋರಮಂಗಲ 1ನೇ ಬ್ಲಾಕ್ ನಲ್ಲಿನ ಕೆಲವು ರಸ್ತೆಗಳಿಗೆ ರಸ್ತೆ ನಾಮಫಲಕವಿರುವುದಿಲ್ಲ. ಆದುದರಿಂದ ರಸ್ತೆ ನಾಮಫಲಕಗಳನ್ನು ಅಳವಡಿಸುವಂತೆ ಸಭೆಗೆ ತಿಳಿಸಿದರು.

ಶ್ರೀಮತಿ ನೀರಜಾ ಶೆಟ್ಟಿ ರವರು ಮಾತನಾಡಿ, 80 ಅಡಿರಸ್ತೆಯಲ್ಲಿರುವ ರಸ್ತೆ ಚರಂಡಿಯು ಬ್ಲಾಕ್ ಆಗಿರುತ್ತದೆ. ಆದುದರಿಂದ ಬ್ಲಾಕ್ ಆಗಿರುವ ರಸ್ತೆ ಚರಂಡಿಯನ್ನು ತೆರವುಗೊಳಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀಮತಿ ಪದ್ಮಶ್ರೀ ಬಲರಾಮ್ ರವರು ಮಾತನಾಡಿ, ಕೋರಮಂಗಲ 1ನೇ ಬ್ಲಾಕ್‌ನಲ್ಲಿ ರಸ್ತೆ ಚರಂಡಿಗಳಲ್ಲಿ ಹೆಗ್ಗಣಗಳ ಕಾಟ ಜಾಸ್ತಿಯಾಗಿರುತ್ತದೆ. ಆದುದರಿಂದ ರಸ್ತೆ ಚರಂಡಿಗಳಿಗೆ ನೀರು ಹೋಗಲು ಬಿಟ್ಟಿರುವ ಜಾಗಗಳಲ್ಲಿ ಜಾಲರಿಗಳನ್ನು ಅಳವಡಿಸಬೇಕೆಂದು ಸಭೆಯಲ್ಲಿ ಕೋರಿದರು.



Scanned by CamScanner

ಶ್ರೀಮತಿ ಪಾರ್ವತಿ ಶ್ರೀರಾಮ್ ರವರು ಮಾತನಾಡಿ, ಹೊಸದಾಗಿ ಕಟ್ಟಡಗಳನ್ನು ನಿರ್ಮಿಸುವಾಗ ಕೂಲಿ ಕೆಲಸಗಾರರಿಗೆ ತಾತ್ಕಾಲಿಕವಾಗಿ ರಸ್ತೆಯ ಬದಿಗಳಲ್ಲಿ ಮನೆ ಹಾಗೂ ಶೌಚಾಲಯಗಳನ್ನು ನಿರ್ಮಿಸಿರುತ್ತಾರೆ. ಆದರೆ ಶೌಚಾಲಯದ ನೀರನ್ನು ಒಳಚರಂಡಿಗೆ ಸಂಪರ್ಕ ನೀಡದೇ, ರಸ್ತೆ ಚರಂಡಿಗಳಿಗೆ ಸಂಪರ್ಕ ನೀಡಿರುವುದು ಕಂಡು ಬಂದಿರುತ್ತದೆ. ಆದುದರಿಂದ ಸಂಬಂಧಪಟ್ಟವರು ಇದರ ಬಗ್ಗೆ ಸೂಕ್ತ ಕ್ರಮವಹಿಸಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀಮತಿ ನೀರಜಾ ಶೆಟ್ಟಿ ರವರು ಮಾತನಾಡಿ, ಕ್ಲಬ್ ರಸ್ತೆಯಲ್ಲಿರುವ ಖಾಲಿ ನಿವೇಶನದ ಮುಂಭಾಗದಲ್ಲಿರುವ ಫುಟ್‌ಪಾತ್‌ನಲ್ಲಿ ಸಿಗರೇಟ್ ಅಂಗಡಿ ತೆರೆದು ಆ ಸ್ಥಳವನ್ನು ಮಾಲಿನ್ಯ ಉಂಟುಮಾಡುತ್ತಿರುತ್ತಾರೆ. ಆದುದರಿಂದ ಅವುಗಳನ್ನು ತೆರವುಗೊಳಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಅನುಷ್ಠಾನಕ್ಕೆ ತಂದು ಮತ್ತು ಮುಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಗುವುದು ಎಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಚಂದ್ರಶೇಖರ್ .ಪಿ)
ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್–151 ಕೋರಮಂಗಲ

(ಶ್ರೀ ಪಿ. ವನರಾಜ) 06/09/2024
ನೋಡಲ್ ಅಧಿಕಾರಿಗಳು ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು

**ಪ್ರತಿಯನ್ನು:**

1. ಕೇಂದ್ರ ಕಛೇರಿಯ bbmp198wardcommitte@gmail.com ಇ–ಮೇಲ್ ಮುಖಾಂತರ ಸಲ್ಲಿಸುತ್ತಾ ಬೃ.ಬೆಂ.ಮ.ಪಾಯ ಅಂತರ್ಜಾಲದಲ್ಲಿ ಪ್ರಕಟಿಸಲು ಈ ಮೂಲಕ ಕೋರಲಾಗಿದೆ.
2. ಕಛೇರಿ ಕಡತಕ್ಕೆ.



Scanned by CamScanner